


# ಸೈಲೆಂಟ್ ಕಿಲ್ಲರ್

ಅಧಿಕ ರಕ್ತದೊತ್ತಡದಿಂದ ಹೃದಯಾಘಾತವಾಗುವ ಸಂಭವ ಹೆಚ್ಚು. ಆದರೆ ವ್ಯಕ್ತಿಯಲ್ಲಿ ಹೈಪರ್ ಟೆನ್ಶನ್ ನ ಲಕ್ಷಣಗಳು ಕಾಣಿಸಿಕೊಳ್ಳುವುದು ಬಹಳ ಅಪರೂಪ. ಈ ಕಾರಣಕ್ಕಾಗಿಯೇ ಇದನ್ನು `ಸೈಲೆಂಟ್ ಕಿಲ್ಲರ್' ಎನ್ನುವುದು.

■ ಡಾ.ಗಿರೀಶ್ ಗೋಡ್‌ಬೋಲೆ

ಒಂದು ದಿನ ಹೃದಯಾಘಾತಕ್ಕೆ ತುತ್ತಾದ ಒಬ್ಬ ವ್ಯಕ್ತಿ ನನ್ನ ಬಳಿ ಬಂದರು. ಅವರಿಗೆ ತುರ್ತಾಗಿ ಚಿಕಿತ್ಸೆ ನೀಡಿದೆವು. ಈ ಹಿಂದೆ ಅವರಿಗೆ ಯಾವುದೇ ಅನಾರೋಗ್ಯ ಸಮಸ್ಯೆ ಕಾಡಿರಲಿಲ್ಲ. ಆದರೂ ಈ ಹೃದಯಾಘಾತ ಏಕೆ ಬಂದಿತು ಎಂಬ ಪ್ರಶ್ನೆ ಮಾತ್ರ ಅವರನ್ನು ಕಾಡುತ್ತಿತ್ತು. ಆದರೆ, ಅವರಿಗೆ ಇಕೋಕಾರ್ಡಿಯೋಗ್ರಾಂ ಮಾಡಿದಾಗ ಅವರಲ್ಲಿ ದೀರ್ಘ ಕಾಲದಿಂದ ಇದ್ದ ರಕ್ತದೊತ್ತಡ (ಬಿಪಿ) ಅಥವಾ ಅಧಿಕ ಒತ್ತಡದಲ್ಲಿನ ಬದಲಾವಣೆ ಕಂಡುಬಂದಿತು. ಇದೂ ಸಹ ಹೃದಯಾಘಾತಕ್ಕೆ ಒಂದು ಕಾರಣವೇ ಎಂಬುದನ್ನು ದೃಢಪಡಿಸಿಕೊಂಡೆವು.

ಆದರೆ ರೋಗಿಯು, 'ನನಗೆ ರಕ್ತದೊತ್ತಡವೇ ಇಲ್ಲವಲ್ಲ ಡಾಕ್ಟರ್' ಎಂದು ಆಶ್ಚರ್ಯಚಕಿತರಾದರು. ಅಧಿಕ ಒತ್ತಡ ಅಥವಾ ಹೈಪರ್‌ಟೆನ್ಶನ್ ಇರುವ ಬಹುತೇಕ ಎಲ್ಲಾ ರೋಗಿಗಳಿಂದ ಬರುವ ಪ್ರತಿಕ್ರಿಯೆ ಇದೇ ಆಗಿರುತ್ತದೆ. ಏಕೆಂದರೆ ತಮಗೆ ಹೈಪರ್‌ಟೆನ್ಶನ್ ಇದೆ ಎಂಬುದು ಅವರ ಅರಿವಿಗೆ ಬಂದಿರುವುದೇ ಇಲ್ಲ. ಈ ಹೈಪರ್‌ಟೆನ್ಶನ್ ಲಕ್ಷಣಗಳೂ ಅವರಿಗೆ ತಿಳಿದಿರುವುದಿಲ್ಲ. ದುರದೃಷ್ಟವೆಂದರೆ ಈ ಹೈಪರ್‌ಟೆನ್ಶನ್‌ನ ಮೊದಲ ಸೂಕ್ಷ್ಮತೆಯ ವೇಳೆಯಲ್ಲೇ ಹೃದಯಾಘಾತ, ಪಾರ್ಶ್ವವಾಯು ಅಥವಾ ಸಾವನ್ನಪ್ಪುವ ಪ್ರಕರಣಗಳೂ ಸಂಭವಿಸುತ್ತವೆ.

ಅಧಿಕ ರಕ್ತದೊತ್ತಡ ದೀರ್ಘಕಾಲದ್ದಾಗಿದ್ದು (ಸಾಮಾನ್ಯವಾಗಿ ಜೀವನ ಪರ್ಯಂತ) ವೈದ್ಯಕೀಯ ಚಿಕಿತ್ಸೆ ಪಡೆಯಲೇಬೇಕಾದ ಸ್ಥಿತಿಯಲ್ಲಿರುತ್ತದೆ. ಇದರಲ್ಲಿ ಅಪಧಮನಿಗಳಲ್ಲಿರುವ ಬಿಪಿ ನಿರಂತರವಾಗಿ ಹೆಚ್ಚಾಗುತ್ತಲೇ ಇರುತ್ತದೆ.

## ಲಕ್ಷಣಗಳೇನು?

ಸಾಮಾನ್ಯವಾಗಿ ಅಧಿಕ ರಕ್ತದೊತ್ತಡದ ಲಕ್ಷಣಗಳು ಕಾಣಿಸಿಕೊಳ್ಳುವುದು ಅಪರೂಪ. ಈ ಕಾರಣಕ್ಕಾಗಿಯೇ ಇದನ್ನು 'ಸೈಲೆಂಟ್ ಕಿಲ್ಲರ್' ಎನ್ನುವುದು. ಸಣ್ಣದಾಗಿ ಅಥವಾ ಸಾಮಾನ್ಯವಾದ ತಲೆನೋವು ಕಾಣಿಸಿಕೊಂಡರೆ ಅಧಿಕ ರಕ್ತದೊತ್ತಡದ ಲಕ್ಷಣವೆಂದೇ ಜನ ತಿಳಿದುಕೊಳ್ಳುತ್ತಾರೆ. ಆದರೆ ಅಧಿಕ ರಕ್ತದೊತ್ತಡಕ್ಕೆ ಬದಲಾಗಿ ಹೆಚ್ಚು ಆತಂಕಕ್ಕೆ ಒಳಗಾದಾಗ ಕಾಣಿಸಿಕೊಳ್ಳುವ ಲಕ್ಷಣಗಳು ಇವಾಗಿವೆ.

ಅಧಿಕ ರಕ್ತದೊತ್ತಡವನ್ನು ಈ ರೀತಿ ನಿರ್ಣಯಿಸಬಹುದು..

* ತಪಾಸಣೆ ಮಾಡುವ ಮೂಲಕ
* ಸಂಬಂಧವಿಲ್ಲದ ಸಮಸ್ಯೆಗೆ ಆರೋಗ್ಯ ಆರೈಕೆ ಮಾಡುವಾಗ
* ಪಾರ್ಶ್ವವಾಯು, ಹೃದಯಾಘಾತ ಸೇರಿದಂತೆ ಮತ್ತಿತರ ಸಮಸ್ಯೆಗಳ ಸಂದರ್ಭದಲ್ಲಿ ಅಧಿಕ ರಕ್ತದೊತ್ತಡ ಎದುರಾಗುವುದು.

ಹಲವು ಸಮಸ್ಯೆಗಳು ಎದುರಾದಾಗ ಹೈಪರ್‌ಟೆನ್ಶನ್ ಅನ್ನು ಪತ್ತೆ ಮಾಡಿ ಅದಕ್ಕೆ ಸೂಕ್ತ ನಿಯಂತ್ರಣ ಚಿಕಿತ್ಸೆ ಪಡೆಯುವುದು ಸೂಕ್ತ. ತಪಾಸಣೆ ಮಾಡುವ ವೇಳೆಗೆ ಅದು ತುಂಬಾ ಸಂಕೀರ್ಣತೆಗೆ ತಲುಪಿದ್ದರೆ ಮತ್ತಷ್ಟು